ಕಾಣಿಸಿಕೊಳ್ಳುತ್ತದೆ. ಇಪ್ಪತ್ತಾಲ್ಕು ಗಂಟೆಗಳ ನಂತರ ಪ್ರಾರಂಭವಾಗುವ ಇದನ್ನು 'ಫಿಸಿಯಲಾಜಿಕಲ್ ಕಾಮಾಲೆ' ಎನ್ನಲಾಗುತ್ತದೆ. ಇದು ಸಾಮಾನ್ಯವಾಗಿ ಹತ್ತರಿಂದ ಹದಿನಾಲ್ಕು ದಿನಗಳಲ್ಲಿ ನಿಯಂತ್ರಣಕ್ಕೆ ಬರುತ್ತದೆ. ಅವಧಿಪೂರ್ವ ಶಿಶುಗಳಲ್ಲಿ ಇದರ ತೀವ್ರತೆ ಹೆಚ್ಚು ಮತ್ತು ತೀವ್ರ ಸ್ವರೂಪದಲ್ಲಿದ್ದಾಗ ಬೆಳಕಿನ ಚಿಕಿತ್ಸೆ(ಫೋಟೊಥೆರಪಿ)ಯ ಅಗತ್ಯವಿರುತ್ತದೆ.

### ರಕ್ತದ ನಂಜು

ಮಗು ಹಾಲು ಕುಡಿಯಲು ನಿರಾಕರಿಸುವುದು, ಮಂಕಾಗುವುದು, ಕಾಮಾಲೆ, ಹೊಟ್ಟೆಯುಬ್ಬರ, ಪಕ್ಕೆಯೆಳೆತ, ಫಿಟ್ಸ್, ಜ್ವರ... ಇವು ರಕ್ತದ ನಂಜಿನ ಕೆಲವು ಲಕ್ಷಣಗಳು. ಇದೊಂದು ಗಂಭೀರ ಸಮಸ್ಯೆಯಾಗಿರುವುದರಿಂದ ಇಂಥ ಲಕ್ಷಣಗಳಿರುವ ಮಗುವನ್ನು ತಡಮಾಡದೆ ವೈದ್ಯರಲ್ಲಿ ಕರೆದೊಯ್ಯಬೇಕು. ರಕ್ತದ ನಾನಾ ಪರೀಕ್ಷೆಗಳ ಮುಖಾಂತರ ನಂಜು ದೃಢಪಟ್ಟರೆ ತೀವ್ರನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತದೆ.

### ಅನಿಲದ ಹೊಟ್ಟೆಯುಬ್ಬರ

ಸಾಮಾನ್ಯವಾಗಿ ಹಾಲೂಡಿಸುವಾಗ ಶಿಶುಗಳು ಸಾಕಷ್ಟು ಪ್ರಮಾಣದ ಗಾಳಿಯನ್ನು ನುಂಗುತ್ತವೆ ಮತ್ತು ಹಾಲು ಪಚನವಾಗುವ ಕ್ರಿಯೆಯಲ್ಲಿ ಕರುಳಿನಲ್ಲಿಯೂ ಸಾಕಷ್ಟು ಪ್ರಮಾಣದ ಅನಿಲ ಉತ್ಪತ್ತಿಯಾಗುತ್ತದೆ. ಇದರಿಂದ ಹೊಟ್ಟೆ ಉಬ್ಬರಿಸಿಕೊಂಡು ಶಿಶುಗಳು ಅಳತೊಡಗುತ್ತವೆ. ಭುಜದ ಮೇಲೆ ಒರಗಿಸಿಕೊಂಡು, ಐದ್ಹತ್ತು ನಿಮಿಷಗಳವರೆಗೆ ಬೆನ್ನು ನೀವುವುದರ ಮೂಲಕ ತೇಗು ಬರಿಸಿ ಈ ಸಮಸ್ಯೆಯನ್ನು ಪರಿಹರಿಸಬಹುದು. ಇದಕ್ಕೆ 'ಬರ್ಪಿಂಗ್' ಎನ್ನಲಾಗುತ್ತದೆ.

### ಕಕ್ಕುವುದು

ಅನ್ನನಾಳದ ಅಸಮರ್ಪಕ ಬೆಳವಣಿಗೆಯಿಂದ ಅರೆಪಚನಗೊಂಡ ಹಾಲನ್ನು ಶಿಶುಗಳು ಸಾಮಾನ್ಯವಾಗಿ ದಿನದಲ್ಲಿ ಐದಾರು ಬಾರಿ ಕಕ್ಕುತ್ತಿರುತ್ತವೆ. ಈ ಸಮಸ್ಯೆ ಸುಮಾರು ಆರು ತಿಂಗಳುಗಳಲ್ಲಿ ಕಡಿಮೆಯಾಗುವುದಾದರೂ ಕೆಲವೊಮ್ಮೆ ಒಂದು ವರ್ಷದವರೆಗೂ ಮುಂದುವರಿಯಬಹುದು. ಕಕ್ಕುವಿಕೆ





ಅತಿಯಾಗಿದ್ದರೆ ಇಲ್ಲವೆ ಅದರಿಂದ ಮಗುವಿನ ತೂಕದಲ್ಲಿ ಹೆಚ್ಚಳವಾಗದೇ ಇದ್ದರೆ ಚಿಕಿತ್ಸೆಯ ಅವಶ್ಯಕತೆ ಇರುತ್ತದೆ.

### ಶಿಶುವಿನ ಕರುಳು ಕಿವುಚುವಿಕೆ

ಇದು ಎರಡು ವಾರಗಳ ನಂತರ ಯಾವಾಗ ಬೇಕಿದ್ದರೂ ಕಾಣಿಸಿಕೊಳ್ಳಬಹುದಾದರೂ ಮೂರನೇ ತಿಂಗಳಿನಲ್ಲಿ ಸರ್ವೇಸಾಮಾನ್ಯ. ಹಾಗಾಗಿ ಇದಕ್ಕೆ 'ಮೂರನೇ ತಿಂಗಳ ಕರುಳು ಕಿವುಚುವಿಕೆ' ಎನ್ನಲಾಗುತ್ತದೆ ಸಂಜೆಯಾಗುತ್ತಿದ್ದಂತೆ ಮಗು ಮೂರ್ನಾಲ್ಕು ಗಂಟೆಗಳ ಕಾಲ ರಚ್ಚೆ ಹಿಡಿದು ಅಳತೊಡಗುತ್ತದೆ. ಇದು ವಾರದಲ್ಲಿ ಮೂರ್ನಾಲ್ಕು ಬಾರಿ ಪುನರಾವರ್ತನೆಯಾಗುತ್ತದೆ. ಇದಕ್ಕೆ ಇಂಥದ್ದೇ ಕಾರಣ ಎಂದು ತಿಳಿದುಬಂದಿಲ್ಲ. ವೈದ್ಯರ ಸಲಹೆ ಪಡೆದು ಮಗುವನ್ನು ಶಾಂತಗೊಳಿಸುವಂಥ ಕೆಲವು ಔಷಧಗಳನ್ನು ಬಳಸಬಹುದು. ಒಂದೆರಡು ತಿಂಗಳುಗಳಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ.

### ಜ್ವರದೊಂದಿಗೆ ಫಿಟ್ಸ್

ಮೂರು ತಿಂಗಳು ಮತ್ತು ಆರು ವರ್ಷಗಳ ನಡುವಿನ ವಯೋಮಾನದ ಕೆಲ ಮಕ್ಕಳಲ್ಲಿ




ಯಾವುದೇ ಕಾರಣದಿಂದ ಜ್ವರ ಬಂದಾಗ ನರಮಂಡಲ ಪ್ರಚೋದಿಸಲ್ಪಟ್ಟು ಫಿಟ್ಸ್ ಬರುವ ಸಾಧ್ಯತೆಯಿರುತ್ತದೆ. ಇದಕ್ಕೆ 'ಜ್ವರದ ಫಿಟ್ಸ್' ಎನ್ನಲಾಗುತ್ತದೆ. ಆದರೆ ಒಂದು ವರ್ಷದ ಒಳಗಿನ ಮಕ್ಕಳಲ್ಲಿ ಜ್ವರದೊಂದಿಗೆ ಫಿಟ್ಸ್ ಬಂದಾಗ ಬ್ಯಾಕ್ಟೀರಿಯಾದ ಸೋಂಕಿನಿಂದುಂಟಾಗುವ ಮಿದುಳುಪೊರೆಯ